ಬಂದಿದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೇನೆ. ಏಕೆಂದರೆ ನಬಾರ್ಡ್ ಯಾವತ್ತೂ ಕೂಡ ಸಾಲ ಮನ್ನಾದ ಈ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿಕೊಂಡು ಬರುತ್ತದೆ. ನಬಾರ್ಡ್‌ನವರು ಸ್ಪಷ್ಟವಾಗಿ ಹೇಳಿದರು ರೈತರಿಗೆ ನೇರವಾಗಿ ಹಣವನ್ನು ಪಾವತಿ ಮಾಡಿಯಾವುದೇ ಸಹಕಾರಿರಂಗಕ್ಕೆ ಪಾವತಿ ಮಾಡುತ್ತೇವೆ ಎಂದು ಹೇಳಿದಾಗ ಅದಕ್ಕೆ ನಿರ್ದಿಷ್ಟ ಸಮಜಾಯಿಷಿ ಬೇಕು. ಅದು ಪಾವತಿಯಾಗದಾಗ ಮಾತ್ರ ಈ ಸಹಕಾರಿರಂಗಗಳು ಕೂಡ ನಷ್ಟಕ್ಕೆ ಬರುವುದರ ಕಾರಣ ನಮಗೆ ಪುನಃ ರೀಫೈನಾನ್ಸ್ ಮಾಡಲಿಕ್ಕೆ ಕಷ್ಟ ಆಗುತ್ತದೆ ಎಂದು ಹೇಳುವಂಥ ಮಾತನ್ನು ಹೇಳಿದರು. ಆದರೆ ಆ ರೀತಿ ಮಾಡದ ಕಾರಣ ನಬಾರ್ಡ್ ಅಥವಾ ಯಾವುದೇ ಒಂದು ಸಂಸ್ಥೆಗಳು ಇವತ್ತು ಪಿಎಲ್‌ಡಿ ಬ್ಯಾಂಕುಗಳಿಗೆ ಸಾಲವನ್ನು ಕೊಡದಾಥ ಸಂದರ್ಭ ನಿರ್ಮಾಣವಾದವು, ಅಂತಹವು ಈಗಾಗಲೇ ಸ್ವಲ್ಪಮಟ್ಟಿಗೆ ಸರಿಯಾಗದೆ ಎಂದು ಹೇಳುವಂಥ ವಿಚಾರವನ್ನು ಕೂಡ ನಾವು ತಿಳಿದುಕೊಂಡಿದ್ದೇವೆ. ಹೀಗೆ ಒಟ್ಟಾರೆ.....

ಅಧ್ಯಕ್ಷರು : ತಾವು ಮುಗಿಸಿ.

ಶ್ರೀ ಸದಾನಂದಗೌಡ : ದಯವಿಟ್ಟು ನಾಳೆ ಒಂದು ಅವಕಾಶ ಕೊಟ್ಟರೆ ಅನೇಕ ಸಂಗತಿಗಳನ್ನು ಹೇಳುವುದು ಇದೆ.

ಅಧ್ಯಕ್ಷರು : ಆಯಿತು, ನಾಳೆ ಒಂದೈದು ನಿಮಿಷ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಈಗ ಸನ್ಮಾನ್ಯ ಸಭಾನಾಯಕರು ತುಂಗಭದ್ರ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಕೊಡಬಹುದು.

ಮಂತ್ರಿಗಳ ಹೇಳಿಕೆ

ತುಂಗಾಭದ್ರಾ ಎಡದಂಡೆ ನಾಲೆಯನ್ನು ಏಪ್ರಿಲ್ 8ಕ್ಕೆ ಮುಚ್ಚುವಂತೆ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯವಾಗಿದ್ದು ಪ್ರಸಕ್ತ ಪರಿಸ್ಥಿಯಲ್ಲಿ ಆ ರೀತಿ ನೀರನ್ನು ನಿಲ್ಲಿಸಿದಲ್ಲಿ ರಾಯಚೂರು ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟಿರುವ ಎಲ್ಲಾ ತಾಲ್ಲೂಕುಗಳಲ್ಲಿಯೂ ಸುಮಾರು ಎರಡು ಲಕ್ಷ ಜಮಿನಿಗೆ ನೀರು ಇಲ್ಲದೆ ಬೆಳೆ ಒಣಗಿ ಹೋಗುವ ಸಂಭವ ಇರುವ ಪ್ರಯುಕ್ತ ಏಪ್ರಿಲ್ 8ಕ್ಕೆ ಬದಲಾಗಿ 20 ನೇ ತಾರೀಖಿನವರೆಗೆ ಮುಂದುವರಿಸುವ ಬಗ್ಗೆ.

ಶ್ರೀ ಎಚ್.ಡಿ. ದೇವೇಗೌಡರು : ತುಂಗಭದ್ರಾ ಎಡದಂಡೆ ಕಾಲುವೆ ಆಗಿದ್ದು ಏರಿಗಳಲ್ಲಿ ಹಾಗೂ ಅಡ್ಡಮೋರಿಗಳ ಹತ್ತಿರ ನೀರು ಜಿನುಗುವುದು ಹಾಗೂ ಬಿರುಕು ಬಿಡುವುದು ಆಗಾಗ್ಗೆ ಭಾಗದ ರೈತ ಮುಖಂಡರು ಹಾಗೂ ಶಾಸಕರುಗಳ ಕೋರಿಕೆಯ ಮೇರೆಗೆ 1995ರ ಕ್ಲೋಷರ್ ಅವಧಿಯಲ್ಲಿ ಈ ಕಾಲುವೆಯ ಒಳಮೈ ಭದ್ರತಾ ಕಾಮಗಾರಿಗಳನ್ನು (Inner Stangthaning Works) ಕೈಗೆತ್ತಿಕೊಳ್ಳಲು ಸರ್ಕಾರವು ದಿನಾಂಕ 29.11.1994ರ ಸಭೆಯಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯಲ್ಲಿ ದಿನಾಂಕ 8.4.1995ರವರೆಗೆ ನೀರನ್ನು ಒದಗಿಸಿಲು ತೀರ್ಮಾನಿಸಿರುತ್ತದೆ. ಈ ನಿರ್ಣಯವನ್ನು ಪತ್ರಿಕಾ ಪ್ರಕಟಣೆಯ ಮೂಲಕ ಸದರಿ ನಾಲೆಯ ಆಚ್ಚುಕಟ್ಟಿನ ಎಲ್ಲಾ ರೈತ ಬಾಂಧವರಿಗೆ ತಿಳಿಸಲಾಗಿರುತ್ತದೆ.

ದಿನಾಂಕ 5.3.1995 ರಂದು ನಡೆದ ತುಂಗಭದ್ರಾ ಮಂಡಳಿಯ ಸಭೆಯಲ್ಲಿ ತುಂಗಭದ್ರಾ ಜಲಾಶಯದಲ್ಲಿನ ಅಂದಿನ ನೀರಿನ ಪ್ರಮಾಣದದ ಲಭ್ಯತೆ ಅನುಸಾರ ಸದರಿ ಕಾಲುವೆಗೆ 9.408 ಟಿ.ಎಂ.ಸಿ. ನೀರನ್ನು ದಿನಾಂಕ 7.3.1995 ರಿಂದ 8.4.1995 ರವರೆಗೆ ಪ್ರತಿ ದಿನ 3,300 ಕ್ಯೂಸೆಕ್ಸ್‌ನಂತೆ ಸರಬರಾಜು ಮಾಡಲು ನಿರ್ಧರಿಸಿದ್ದು

ಇದನ್ನು ಕಾಯ್ದಿರಿಸುವಂತೆ ನಿರ್ಧರಿಸಲಾಗಿರುತ್ತದೆ. ಆದರಂತೆ ಕಾಲುವೆಯಲ್ಲಿ ನೀರನ್ನು ಬಿಡಲಾಗುತ್ತಿದೆ.

ದಿನಾಂಕ 8.4.1995 ರಿಂದ 20.4.1995 ರವರೆಗೆ ನಾಲೆಯಲ್ಲಿ ನೀರನ್ನು ಮುಂದುವರಿಸಬೇಕಾದರೆ ಸುಮಾರು 39.600 ಕ್ಯೂಸೆಕ್ಸ್ (3,300x12) ಅಥವಾ 3.42 ಟಿ.ಎಂ.ಸಿ. ನೀರು ಬೇಕಿದ್ದು ದಿನಾಂಕ 8.4.1995ರಂದು 1580ರ ಮಟ್ಟ ತಲುಪಿದ ನಂತರ ಇಷ್ಟು ಪ್ರಮಾಣದ ನೀರನ್ನು ಜಲಾಶಯದಿಂದ ಬಿಡಲು ಸಾಧ್ಯವಿರುವುದಿಲ್ಲ, ಇದರ ಜೊತೆಗೆ ಮೊದಲನೆ ಖಂಡಿಕೆಯಲ್ಲಿ ತಿಳಿಸದಂತೆ ದಿನಾಂಕ 10.4.1995 ರಿಂದ 30.6.1995 ರವರೆಗೆ ಕಾಲುವೆಯ ಒಳಮೈ ಬಲಪಡಿಸಿಲು ಕಾರ್ಯಕ್ರಮವಿರುತ್ತದೆ. ಈ ಕಾರ್ಯಕ್ರಮಕ್ಕೆ ಕನಿಷ್ಟ 75 ದಿನಗಳು ಬೇಕಾಗುತ್ತದೆ. ಈ ನಿರ್ಣಯವನ್ನು ಕೂಡ ನೀರಾವರಿ ಸಲಹಾ ಸಮಿತಿಯು ತನ್ನ ದಿನಾಂಕ 8.12.1994ರ ಸಭೆಯಲ್ಲಿ ತೆಗೆದುಕೊಂಡಿರುತ್ತದೆ (ದಿನಾಂಕ 28.5.1995 ರಿಂದ 4.6.1995ರವರೆಗೆ ಒಂದು ಭಾರಿ ನೀರನ್ನು ಬೆಳೆದು ನಿಂತಿರುವ ಕಬ್ಬಿನ ಬೆಳೆಗೆ ಒದಗಿಸುವುದನ್ನು ಹೊರತುಪಡಿಸಿ) ಆದಕಾರಣ, ದಿನಾಂಕ 8.4.1995ರ ನಂತರವೂ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯಲ್ಲಿ ನೀರನ್ನು ಬಿಡುವುದು ಸಾಧ್ಯ ಪರಿಸ್ಥಿತಿಯಲ್ಲಿ ಕಷ್ಟದ ವಿಷಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು 8-12-94ರಲ್ಲಿ ತೆಗೆದುಕೊಂಡಿದ್ದೇವೆ ಎನ್ನತಕ್ಕಂಥದನ್ನು ಇದರಲ್ಲಿ ಹೇಳಿದ್ದಾರೆ, ಅದು ಸಲಹಾಸಮಿತಿಯವರು ಎಲ್ಲರೂ ಸೇರಿ. ತಮಗೆಲ್ಲಾ ಗೊತ್ತಿದೆ ಆಗ ಚುನಾವಣೆ ಇನ್ನೂ ನಡೆದಿತ್ತು ಮತ್ತು ನಮ್ಮ ಚುನಾವಣೆಯ ಫಲಿತಾಂಶ ನನಗನ್ನಿಸಿದ ಮಟ್ಟಿಗೆ 9ನೇ ಡಿಸೆಂಬರ್ 94ರಂದು ಪ್ರಕಟವಾಯಿತು. ಅಂದಾಗ ಅದು 8ನೇ ತಾರೀಖು ನಡೆದಂಥ ಸಲಹಾಸಮಿತಿಯಲ್ಲಿ ಬಹುಶಃ ಯಾವ ಶಾಸಕರೂ ಕೂಡ ಅಲ್ಲಿ ಹಾಜರಿರಲಿಲ್ಲ ಮತ್ತು ಯಾವ ಶಾಸಕನೂ ಕೂಡ ಹೋಗತಕ್ಕಂಥ ಸಾಧ್ಯತೆ ಇರಲಿಲ್ಲ ಅಥವಾ ಯಾರಿಗೆ ಈ ವಿಷಯದ ಬಗ್ಗೆ ಆಸಕ್ತಿ ಇದೆ, ಆ ನೀರಿನ ಬಗ್ಗೆ ಕಾಳಜಿ ಇದೆ, ಅವರೂ ಕೂಡ ಅದರಲ್ಲಿ ಹೆಚ್ಚಿನ ಜನ ಇರಲಿಲ್ಲ ಅಂದಾಗ ಈ ಸಭೆಯಲ್ಲಿ ತೆಗೆದುಕೊಂಡಂಥ ನಿರ್ಣಯವನ್ನು ಇವತ್ತು ನೀವು ಜಾರಿಯಲ್ಲಿ ತಂದರೆ ಖಂಡಿತವಾಗಿಯೂ ರಾಯಚೂರು ಜಿಲ್ಲೆಯಲ್ಲಿ ಇರತಕ್ಕಂಥ ಸುಮಾರು ನಾಲ್ಕು ಲಕ್ಷ ಎಕೆರೆ ಜಮೀನಿಗೆ ಎರಡನೆಯ ಬೆಳೆಗೆ ಇವತ್ತು ತಾವು ನೀರು ಪೂರೈಕೆ ಮಾಡಬೇಕು ಎಂದು ಹೇಳಿ ಹಿಂದೆ ಒಪ್ಪಿಕೊಂಡಿದ್ದರಿ, ಅದು ಆಗುವುದಿಲ್ಲ. ಸುಮಾರು ಕೋಟ್ಯಾಂತರ ರೂಪಾಯಿಂದ ಬೆಳೆ ಹಾಳಾಗುತ್ತದೆ ಮತ್ತು ಅಲ್ಲಿನ ರೈತರೂ ಕೂಡ ಹಾಹಾಕಾರ ಎಬ್ಬಿಸುತ್ತಾರೆ ಮತ್ತು ಅನೇಕ ಕಡೆ ಚಳುವಳಿ ಕೂಡ ಪ್ರಾರಂಭವಾಗುತ್ತವೆ ಏಕೆಂದರೆ ಅವರ ಕೋಟ್ಯಾಂತರ ರೂಪಾಯಿಯ ಬೆಳೆ ಹಾಳಾಗುವಾಗ ನಾವು ಒಪ್ಪಿಕೊಂಡಿದ್ದೇವೆ ಎಂದು ತಿಳಿದುಕೊಂಡು ಅದನ್ನು ನಾವು ಜಾರಿಯಲ್ಲಿ ತಂದರೆ ಮತ್ತು ನೀವು ಅವರ ಮಾತಿಗೆ ಬೆಲೆ ಕೊಟ್ಟು ನೀರನ್ನು ಬಿಟ್ಟರೆ ಖಂಡಿತವಾಗಿಯೂ ಇವರಿಗೆ ತೊಂದರೆಯಾಗುತ್ತದೆ.

ಆದ್ದರಿಂದ ಏಪ್ರಿಲ್ 20ನೇ ತಾರೀಖಿನವರೆಗೆ ನೀರನ್ನು ಕೊಟ್ಟರೆ, ಆ ಬೆಳೆಯನ್ನು ಉಳಿಸಿದಂತಾಗುತ್ತದೆ. ಲಕ್ಷಾಂತರ ಜನ ರೈತರ ಜೀವನವನ್ನು ಕಾಪಾಡಿದಂತಾಗುತ್ತದೆ, ಅಲ್ಲದೆ ಅವರು ಈಗ ಏನು ಆರ್ಥಿಕ ತೊಂದರೆಯಲ್ಲಿದ್ದಾರೆ ಅದರಿಂದಲೂ ಅವರನ್ನು ಪಾರು ಮಾಡಿದಂತಾಗುತ್ತದೆ. ಆದ್ದರಿಂದ 8ನೇ ತಾರೀಖು ಏನು ಮೀಟಿಂಗ್ ಆಗಿದೆ ಅದಕ್ಕೆ ತಾವು ಹೇಳುವುದು ಸರಿಯಲ್ಲ. ಇದರಿಂದ ಕೋಟ್ಯಾಂತರ ರೂಪಾಯಿಯ ಬೆಳೆ ಹಾಳಾಗುತ್ತದೆ. ಆದ್ದರಿಂದ ದಯವಿಟ್ಟು 20ನೇ ತಾರೀಖಿನವರೆಗೂ ನೀರನ್ನು ಬಿಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಂಗದೇವರಾಯಲು : ಕಳೆದಸಾರಿ ಕೆನಾಲ್ ಒಡೆದು ಹೋದಮೇಲೆ ನಮ್ಮ ರೈತರು ಬಹಳ ತೊಂದರಗೆ ಒಳಗಾಗಿದ್ದಾರೆ. ಈಗ ಕ್ರಾಪ್ ಹಾರ್ವೆಸ್ಟ್‌ಕೂಡ 10-15 ದಿವಸ ತಡವಾಗುತ್ತಿದೆ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಇಷ್ಟುಮಾತ್ರ ಕೇಳಿಕೊಳ್ಳುತ್ತೇನೆ. ಹೈ ಲೆವೆಲ್ ಕಾನಾಲ್‌ನಲ್ಲಿ (ಲೆಫ್ಟ್ ಬ್ಯಾಂಕ್‌ಕೆನಾಲ್) ನೀರನ್ನು ತಾವು ಕೊಟ್ಟಿದ್ದಿರಿ. ಅದೇರೀತಿ ಲೋ ಲೆವೆಲ್‌ಕೆನಾಲ್‌ನಲ್ಲೂ ಕೂಡ 800 ಸಿ.ಸಿ. ನೀರನ್ನು 31ನೇ ತಾರೀಖಿನವರೆಗೂ ಕೊಟ್ಟಿದ್ದಿರಿ. ನಮ್ಮ ಭಾಗದ ರೈತರ .ಬೆಳೆ ಹಾಳಾಗುವುದನ್ನು ತಪ್ಪಿಬೇಕಾದರೆ ತಾವು ಕನಿಷ್ಟ ಏಪ್ರಿಲ್ 20ನೇ ತಾರೀಖಿನವರೆಗಾದರೂ ನೀರನ್ನು ಕೊಟ್ಟರೆ ಮಾತ್ರ ಅನುಕೂಲವಾಗುತ್ತದೆ. ದಯವಿಟ್ಟು ತಾವು ಇದನ್ನು ಅರ್ಥಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ,ಕಾಲುವೆಯ ಒಳಮೈ ದುರಸ್ತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಈ ದುರಸ್ತಿ ಕಾರ್ಯವನ್ನು ಎಷ್ಟನೇ ಕಿಲೋ ಮೀಟರ್‌ನಿಂದ ಎಷ್ಟನೇ ಕಿಲೋಮೀಟರ್‌ವರೆಗೆ ಕೈಗೆತ್ತಿಕೊಳ್ಳುತ್ತೀರೆಂಬುದನ್ನು ದಯವಿಟ್ಟು ಹೇಳಬೇಕೆಂದು ಮಾನ್ಯ ಮುಖ್ಯ .ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ ಈ ಎಡದಂಡೆ ನಾಲೆ ಪದೇ ಪದೇ ಒಡೆಯುತ್ತಲೇ ಇರುತ್ತದೆ.ಇದಕ್ಕೆ ಕಾರಣವನ್ನು ಹುಡುಕುವುದು ಬೇಡ. ಕಳೆದಸಾರಿ ಉಪಮುಖ್ಯಮಂತ್ರಿಗಳಾಗಿದ್ದು ಮಾನ್ಯ ಎಸ್.ಎಂ. ಕೃಷ್ಣರವರು ಹೋಗಿದ್ದಾರು. ಅನಂತರ ಮಾನ್ಯ ವೀರಪ್ಪಮೊಯ್ಲಿಯವರೂ ಕೂಡ ಹೋಗಿದ್ದಾರು.ಸರಿಯಾಗಿ ನೀರು ಸಪ್ಲೈ ಮಾಡದೇ ಇರುವುದರಿಂದ ನಾಟಿ ಮಾಡುವುದೂ ತಡವಾಗಿದೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಆಂಧ್ರ ಪ್ರದೇಶದವರು ಮುಂಗಾರು ಬೆಳೆಗೆ ನೀರನ್ನು ತೆಗೆದುಕೊಂಡಿಲ್ಲವಾದ್ದರಿಂದ ಈಗ ನೀರನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿರುವುದು ಪತ್ರಿಕೆಗಳಲ್ಲಿ ಆಗಿರತಕ್ಕ ವರದಿ. ನಮ್ಮ ಗ್ರಹಚಾರವೆಂದರೆ, ನಾವು ಕಟ್ಟತಕ್ಕ ರಿಸರ್ವಾಯರ್‌ಗಳಲ್ಲಾ ಸ್ಟೋರೆಜಸ್‌ಫಾರ್ · ಆಂಧ್ರ, ಸ್ಟೋರೇಜಸ್‌ಫಾರ್ ತಮಿಳ್ನಾಡು ಆದರೆ ಬಹಳ ಕಷ್ಟವಾಗುತ್ತದೆ. ಈ ವರ್ಷ ನಾವು ಎಷ್ಟನ್ನು ಉಪಯೋಗಿಸಿಕೊಂಡಿರುವುದು ಬೇರೆ ಪ್ರಶ್ನೆ. ನನಗೆ ಗೊತ್ತಾಗಿರುವ ಪ್ರಕಾರ ನಾವು ಉಪಯೋಗಿಸಿಕೊಳ್ಳಬೇಕಾದ ನೀರನ್ನೂ ಕೂಡ ನಾವು ಉಪಯೋಗಿಸಿಕೊಂಡಿಲ್ಲ. ತುಂಗಭದ್ರಾ ನೀರನ್ನು ನಾವು ಎಷ್ಟು ಉಪಯೋಗಿಸಿಕೊಳ್ಳಬೇಕೋ ಅದು 320 ಟಿ.ಎಂ.ಸಿ.ಎಫ್.ಟಿ.ನಲ್ಲಿ 304 ಟಿಎಂಸಿಎಫ್‌ಟಿಯನ್ನು ಉಪಯೋಗಿಸಿಕೊಂಡು ಬಿಟ್ಟಿದ್ದೇವೆಂದು ಹೇಳಿದ್ದೇವೆ. ಆದರೆ ನಿಜವಾಗಿ 304 ಟಿಎಂಸಿಎಫ್‌ಟಿ ನೀರು ಉಪಯೋಗವಾಗಿಲ್ಲ. ನಾನು ಧೈರ್ಯವಾಗಿ ಈ ಮಾತನ್ನು ಹೇಳುತ್ತೇನೆ. ತುಂಗಭದ್ರಾ ಎಡೆದಂಡೆ ನಾಲೆಗೆ ಎಷ್ಟು ನೀರನ್ನು ಬಿಡಬೇಕೋ ಅಷ್ಟನ್ನು ನಾವು ಬಿಟ್ಟಿಲ್ಲ. ತಮ್ಮಲ್ಲಿ ಏನಾದರೂ ಮಾಹಿತಿ ಇದ್ದರೆ ದಯವಿಟ್ಟು ನೋಡಿ. ಮಾಹಿತಿ ಇದ್ದರೆ ಕೊಡಿ. ಬೆಳೆ ನಿಧಾನವಾಗಿದೆ ಎಂದರೆ ಅದು ರೈತರ ತಪ್ಪಲ್ಲ. ನಮ್ಮ ರೈತರ ಬೆಳೆಯನ್ನು ಒಣಗಿಸಿ ಬೇರೆ ರೈತರಿಗೆ ನೀರನ್ನು ಕೊಡತಕ್ಕದ್ದು ಒಳ್ಳೆಯದಲ್ಲ. ದಯವಿಟ್ಟು ಇದನ್ನು ಯೋಚನೆ ಮಾಡಿನೋಡಿ.

ಶ್ರೀ ಕಾಗೋಡು ತಿಮ್ಮಪ್ಪ : ಎರಡು ಲಕ್ಷ ಎಕರೆಯಲ್ಲಿ ಫಸಲು ಇದ್ದರೆ ಆ ಫಸಲನ್ನು ಉಳಿಸತಕ್ಕ ಕೆಲಸ ಸರ್ಕಾರದ್ದು. ಈ ಹೇಳಿಕೆಯಲ್ಲಿ 2 ಲಕ್ಷ ಎಕರೆಯಲ್ಲಿ ಬೆಳೆ ಬಂದಿರತಕ್ಕದ್ದು ಆಗಲಿ ಅಥವಾ ಅಲ್ಲಿನ ಫಸಲಿಗೆ ನೀರನ್ನು ಕೊಡತಕ್ಕದ್ದನ್ನು ನಿಲ್ಲಿಸುವ ಪ್ರಸ್ತಾಪವಾಗಲಿ ಇಲ್ಲ. ಮಾನ್ಯ ಸದಸ್ಯರು ಈ ವಿಚಾರವನ್ನು ಎತ್ತಿರತಕ್ಕ ಮೂಲ ಉದ್ದೇಶವೆಂದರೆ, ಈಗಿರತಕ್ಕ 2 ಲಕ್ಷ ಎಕರೆಗೆ ಕೊನೆಯ ಗಳಿಗೆಯವರೆಗೂ ನೀರನ್ನು ಕೊಟ್ಟು ಆ ಬೆಳೆಯನ್ನು ರಕ್ಷಿಸಬೇಕು ಎಂಬ ಉದ್ದೇಶ. ಮಾನ್ಯ ದೇವೇಗೌಡರು ವಿಶೇಷವಾಗಿ ಈ ಹೇಳಿಕೆಯನ್ನು ಏತಕ್ಕೆ ಕೊಡುತ್ತಿದ್ದಾರೋ ನನಗೆ ಗೊತ್ತಾಗುವುದಿಲ್ಲ.

ನೀರಾವರಿಯ ಬಗ್ಗೆ ನಮಗೆಲ್ಲರಿಗಿಂತಲೂ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದ ಇವರು, ಇವರು ರೈತರ ಮಗ ಎಂದು ಎಲ್ಲರೂ ಹೇಳುತ್ತಿರುವ ಈ ಸಂದರ್ಭದಲ್ಲಿ ರೈತರು ಬೆಳೆದ 2 ಲಕ್ಷ ಎಕರೆಗೆ ನೀರನ್ನು ಕೊಡದೆ ಅದು ಹೋಗುವಂಥ ಪರಿಸ್ಥಿತಿಗೆ ತಂದರೆ ಬಹುಶಃ ಯಾವ ಸರ್ಕಾರವೂ ಕೂಡ ಉಳಿಯುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಮತ್ತು ನಿಖರವಾಗಿ ಹೇಳಬೇಕಾದುದು ಸೂಕ್ತವೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಇವತ್ತು ನನ್ನ ಮುಂದಿರತಕ್ಕ ವಿಷಯ ಅವರ ಸೂಚನೆಯಲ್ಲಿ ಕೊಟ್ಟಿರತಕ್ಕದ್ದು 2 ಲಕ್ಷ ಎಕರೆಯಲ್ಲಿ ನೀರಿಲ್ಲದೆ ಬೆಳೆ ಒಣಗಿ ಹೋಗುವ ಸಂಭವ ಇದೆ ಎಂದು ಅವರು ಏನು ನಿಯಮ 351ರ ಅಡಿಯಲ್ಲಿ ನೋಟೀಸ್ ಕೊಟ್ಟಿದ್ದಾರೆ ಅವರೇ ಈ ಮಾತನ್ನು ಹೇಳಿದ್ದಾರೆ. ನಮ್ಮ ಸರ್ಕಾರ ಏನೂ ಇದನ್ನು ಹೇಳಿಲ್ಲ. ನಮ್ಮಲ್ಲಿ ಒಟ್ಟು ಎಷ್ಟುಎಕರೆಯಲ್ಲಿ ಸ್ಯಾಂಡಿಂಗ್‌ಕ್ರಾಫ್ ಇದೆ ಎಂಬ ಬಗ್ಗೆ ಮಾಹಿತಿ ಇಲ್ಲವೆಂದು ಅದರ ಅರ್ಥ. ಒಂದು ದೂರು ಅವರ ಗಮನಕ್ಕೆ ಬಂದ ಮೇಲೆ ಅದನ್ನು ಈ ಸಭೆಯ ಗಮನಕ್ಕೆ ಬಂದಮೇಲೆ ಅದನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಮಾನ್ಯ ಖರ್ಗೆಯವರು ಎತ್ತಿದಂಥ ವಿಷಯ ಎಂದರೆ, ಆಗ ಚುನಾವಣೆ ನಡೆಯುತ್ತಿತ್ತು ಈ ಸಲಹಾ ಸಮಿತಿಯಲ್ಲಿ ಯಾರ್ಯಾರು ಇದ್ದರು, ಅವರೆಲ್ಲರೂ ಅಟೆಂಡ್ ಮಾಡಿದ್ದಾರೆಯೇ ಇಲ್ಲವೇ ಎಂಬ ಮಾತನ್ನು ಹೇಳಿದ್ದಾರೆ. ಆ ಸಭೆಯಲ್ಲಿ ಯಾರ್ಯಾರು ಇದ್ದರು ಎಂಬ ಮಾಹಿತಿಯನ್ನು ನಾನು ಈ ಸಭೆಗೆ ಒದಗಿಸುತ್ತೇನೆ. ಏಕೆಂದರೆ ಅದರಲ್ಲಿ ರೈತ ಮುಖಂಡರುಗಳು ಇದ್ದಾರೆ, ಶಾಸಕರು ಇದ್ದಾರೆ, ಸ್ಥಳೀಯವಾಗಿ ಕೆಲವು ನಾಮಿನೇಟೆಡ್ ಸದಸ್ಯರಿದ್ದಾರೆ, ಇನ್ನೂ ಯಾರ್ಯಾರು ಇದ್ದರೆಂಬ ವಿವರಗಳನ್ನು ಈ ಸಭೆಗೆ ಒದಗಿಸುತ್ತೇನೆಂಬ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅಷ್ಟೇ ಅಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಜಾಹಿರಾತನ್ನು ಕೊಟ್ಟಿದ್ದಾರೆ. ಇದನ್ನು ಕೊಟ್ಟಿರತಕ್ಕದ್ದು ಇವತ್ತಲ್ಲ. ಡಿಸೆಂಬರ್‌ನಲ್ಲಿ ಕೊಟ್ಟಿರತಕ್ಕದ್ದು.

ಶ್ರೀ ಶ್ರೀರಂಗದೇವರಾಯಲು : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದು ಖರೇ ಆದರೆ, ನಮಗೆ ಅಜೆಂಡಾ ಬರುವುದುತಡವಾಯಿತು. ಆದರೆ ಆ ಮೀಟಿಂಗ್‌ಗನಲ್ಲಿ 8ಕ್ಕೆ ಎಂದು ನಾವು ಒಪ್ಪಿಕೊಳ್ಳಲಿಲ್ಲ. ನಾನೂ ಕೂಡ ಆ ಸಮಿತಿಯ ಸದಸ್ಯ. ನಾವು ಬರುವಾಗ ಹೇಳಿಬಂದಿದ್ದು 15ಕ್ಕೆ ಎಂದು ಹೇಳಿ ಹೊರಗೆ ಬಂದಿದ್ದು. ನಾವು ಬಂದಮೇಲೆ ಅವರು ಏನು ಬೇಕಾದರೂ ಬರೆದುಕೊಂಡಿರಬಹುದು. ನಾವೆಲ್ಲರೂ ಒಂದೇ ಅಭಿಪ್ರಾಯದ ಮೇಲೆ 15ರ ನಂತರ ಕ್ಲೋಸ್ ಮಾಡಿ ಎಂದು ಹೇಳಿದೆವು. ಆದರೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಈಗ ಮಳೆಗಾಲ ಬರುತ್ತದೆ, ಆಗ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ ನಾವು ನಿಮಗೆ ಸಹಾಯ ಮಾಡುತ್ತೇವೆ, 10 ದಿನಗಳ ಕಾಲ ನಮ್ಮ ಲೇಬರರ್ಸ್ ಜೊತೆ ನಾವು ನಿಂತು ಕೆಲಸಮಾಡುತ್ತೇವೆ, 15ನೇ ತಾರೀಖು ಆದಮೇಲೆ ಕ್ಲೋಸ್ ಮಾಡಿ ಎಂದು ಹೇಳಿದ್ದರಿಂದ ನಾವೆಲ್ಲಾ ಎಂದು ಬಂದಿದ್ದುದು.

ಶ್ರೀ ಹೆಚ್.ಡಿ. ದೇವೇಗೌಡ : ಅಂದರೆ ಅವರು ಹೇಳುವ ಪ್ರಕಾರ ಇವರು ಎದ್ದು ಬಂದ ಮೇಲೆ ಅವರು ರೆಸಲ್ಯೂಷನನ್ನು ಬರೆದುಕೊಂಡಿದ್ದಾರೆಂದು ನಾನು ಇನ್‌ಫರೆನ್ಸ್ ಡ್ರಾ ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ಅವರು ಬರೆದುಕೊಂಡಿದ್ದರೂ ಕೂಡ ಪತ್ರಿಕಾ ಪ್ರಕಟಣೆಯನ್ನು ಕೊಟ್ಟಿರತಕ್ಕದ್ದು ತಮಟೆ ಹೊಡೆದು ಊರಿನಲ್ಲೆಲ್ಲಾ ಹೇಳಿರತಕ್ಕದ್ದು, ಇದನ್ನೆಲ್ಲಾ ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲವಲ್ಲಾ. ನೀರಾವರಿ ಇಲಾಖೆ ಅಧಿಕಾರಿಗಳು ಪತ್ರಿಕಾ ಹೇಳಿಯನ್ನುಕೊಟ್ಟು, ಜಾಹಿರಾತನ್ನು ಕೊಟ್ಟು ನೀವು ಬೇಸಾಯ ಮಾಡಬೇಡಿ, ನಾವು 8ನೇ ತಾರೀಖಿನ ಮೇಲೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಜಗಜಾಹೀರು ಮಾಡಿರತಕ್ಕ ಪತ್ರಿಕಾ ಪ್ರಕಟಣೆಗಳು ಕರಪತ್ರಗಳನ್ನು ಹಂಚಿರುವುದನ್ನು ಇವನ್ನೆಲ್ಲಾ ನಾನು ಈ ಸಭೆಯ ಮುಂದೆ ಮಂಡಿಸುವುದಕ್ಕೆ

ಸಿದ್ಧವಾಗಿದ್ದೇನೆ. ಆದರೆ ಅವರು ಏನು ಹೇಳುತ್ತಿದ್ದಾರೆ, ನಾವು ಹೇಳಿ ಬಂದಮೇಲೆ ಅವರು ಮಾಡಿಕೊಂಡಿದ್ದಾರೆ ಎಂದು. ಆದರೆ ಕೂಡಲೇ ಇದನ್ನು ಅವರು ಅಲ್ಲಗಳೆಯಬಹುದಿತ್ತು. ಇಷ್ಟಕ್ಕೆ ಮಾತ್ರ ನಾನು ಇದನ್ನು ನಿಲ್ಲಿಸುತ್ತೇನೆ.

ಮಾನ್ಯ ಅಧ್ಯಕ್ಷರೇ ಏಪ್ರಿಲ್ 8ನೇ ತಾರೀಖಿನವರೆಗೂ ನೀರನ್ನು ಕೊಡುವ ಬಗ್ಗೆ ಲೆಕ್ಕ ಇಡದೆ ಏನು ಆಂಧ್ರದವರು ನಮಗೆ ನೀರನ್ನುಕೊಡಬೇಕೆಂದು ಕೇಳಿದರು ಈ ಸಮಸ್ಯೆ ಉದ್ಭವ ಆದುದು ಈ ಸಾರಿ ಮಾತ್ರ. ನಾನು ಹಿಂದೆ 6 ವರ್ಷಕಾಲ ನೀರಾವರಿ ಖಾತೆ ಮಂತ್ರಿ ಆಗಿದ್ದೆ. ಏಪ್ರಿಲ್ 8 ಅಥವಾ 10ನೇ ತಾರೀಖಿಗೆ ನೀರನ್ನು ನಿಲ್ಲಿಸುವ ವ್ಯವಸ್ಥೆ ನಿನ್ನೆ ಮೊನ್ನೆಯದಲ್ಲ. ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಸಾರಿ ನಮ್ಮ ಬೆಳೆಗೆ ಅಪಾಯ ಮಾಡಿಕೊಂಡು ಅವರಿಗೆ ನೀರನ್ನು ಬಿಟ್ಟುಕೊಡುತ್ತೇವೆಂಬ ನಿರ್ಣಯವನ್ನು ನಾವು ಮಾಡಿಲ್ಲ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಂಕಿಅಂಶಗಳನ್ನೂ ನಾನು ಈ ಸಭೆಗೆ ಒದಗಿಸುತ್ತೇನೆ. ನಾನು ಇವತ್ತು ಆ ಫೈಲನ್ನು ಸಭೆಗೆ ತರಲಿಲ್ಲ. ಕಾರಣ ಕೇವಲ ಒಂದು ಸ್ಟೇಟ್‌ಮೆಂಟ್ ಮಾತ್ರ ಮಾಡಬೇಕಾಗಿದೆ ಎಂದು ಇದನ್ನು ತಂದೆ ಅಷ್ಟೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಕಡತ ಇದೆ. ಇಷ್ಟು ಮಾತ್ರ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಮಸ್ಯೆ ಏತಕ್ಕೆ ಉದ್ಭವವಾಯಿತೆಂದರೆ ಆಂಧ್ರಕ್ಕೆ ಮುಂಗಾರು ಬೆಳೆಗೆ ಸುಮಾರು 9.2 ಟಿಎಂಸಿಎಫ್‌ಟಿ ನೀರನ್ನು ಲೆಫ್ಟ್‌ಬ್ಯಾಂಕ್ ಕೆನಾಲ್‌ನಿಂದ ಬರಬೇಕಾಗಿತ್ತು ಅದನ್ನು ಅವರು ಉಪಯೋಗಿಸಿಕೊಳ್ಳಲಿಲ್ಲ. ಏಕೆಂದರೆ ಅವರ ಭಾಗದ ನಾಲೆಯನ್ನು ರಿಪೇರಿ ಮಾಡಿಕೊಳ್ಳಬೇಕಾಗಿರುವುದರಿಂದ ನಾವು ಈ ಬೆಳೆಗೆ ನೀರನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದರಿಂದ, ಆ ನೀರನ್ನು ಈ ಬೇಸಿಗೆ ಬೆಳೆಗೆ

ಬಿಟ್ಟುಕೊಡಬೇಕೆಂಬ ಒಂದು ಒತ್ತಡವನ್ನು ತೆಗೆದುಕೊಂಡು ಬಂದರು. ಅವತ್ತು 153ನೇ ಬೋರ್ಡ ಮೀಟಿಂಗ್‌ನಲ್ಲಿ ನಮ್ಮ ಪರವಾಗಿ ಯಾರು ನಮ್ಮ ಪ್ರತಿನಿಧಿ ಹೋಗಿದ್ದರು ಅವರ ಮೂಲಕ ಹೇಳಿಕಳುಹಿಸಿದ್ದರಿಂದ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂಬ ನಿರ್ಣಯ ಮಾಡಿದರು. ಅದಾದಮೇಲೆ ಇದರ ಬಗ್ಗೆ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿತು. ಕೇಂದ್ರದ ಮಂತ್ರಿಗಳು ಆಂಧ್ರದವರು ಎಂಬ ಮೋಟಿವೇಷನ್‌ನಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅಥವಾ ಮಾನ್ಯ ಪ್ರಧಾನ ಮಂತ್ರಿಗಳು ಆಂಧ್ರದವರೆಂದು ಆ ರೀತಿ ಹೇಳುವುದಕ್ಕೆ ಹೋಗುವುದಿಲ್ಲ. ಅವರು ನಮಗೆ ಕೊಟ್ಟಂಥ ಸೂಚನೆ, ಇದನ್ನು ಬಹಳ ದೂರ ಎಳೆ ಹಿಡಿಯುವುದು ಬೇಡ. ಅವರು 9.2 ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಳ್ಳಲಿಲ್ಲ. ಅದ್ದರಿಂದ ಅವರ ಬೆಳೆಯನ್ನು ಉಳಿಸುವುದಕ್ಕೆ ನೀವು ಏನಾದರೂ ಒಂದು ಪ್ರಯತ್ನ ಮಾಡಬೇಕೆಂದು ಕೇಂದ್ರ ಸರ್ಕಾರ ನಮಗೆ ಒಂದು ಸೂಚನೆಯನ್ನು ಕೊಟ್ಟಿತು.

ನಾವು ಎಲ್ಲಾ ವಿಷಯಗಳನ್ನು ಸ್ಪಷ್ಟಪಡಿಸಿ ವಿವರಣೆ ಎಲ್ಲಾ ಕೊಟ್ಟು ನಮ್ಮ ಬೆಳೆಗೆ 8ನೇ ತಾರೀಖಿನವರೆಗೆ ನೀರು ಬೇಕಾಗುತ್ತದೆ ಅಷ್ಟು ನೀರು ನಾವು ಉಳಿಸಬೇಕು. ನಾವು ನಮ್ಮ ಬೆಳೆ ಹಾಳು ಮಾಡುವುದಕ್ಕೆ ಸಿದ್ಧ ಇಲ್ಲವೆಂದು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದೇವೆ, ಈ ವಿಷಯದಲ್ಲಿ ನಾವು ಯಾವುದೇ ಅನಾವಶ್ಯಕವಾಗಿ ತೊಂದರೆ ಮಾಡಬೇಕಾದ ಅವಶ್ಯಕತೆ ಇಲ್ಲ, ಅದರೆ ನಮಗೆ ಏಪ್ರಿಲ್ 8ರವರೆಗೆ ನೀರು ಇರಲೇಬೇಕಾಗುತ್ತದೆಂಬ ನಿಲುವನ್ನು ನಾವು ಖಂಡತುಂಡವಾಗಿ ತಿಳಿಸಬೇಕಾಯಿತು. ಅದಾದಮೇಲೆ ಮಧ್ಯೆ ಒಂದು ಹಂತಕ್ಕೆ ಹೋದರು. ತುಂಗಭದ್ರ ಬೋರ್ಡಿನ ಛೇರ್ಮನ್ ಯಾರಿದ್ದಾರೆ ಅವರು ಕೇಂದ್ರ ಸರ್ಕಾರದ ಪ್ರತಿನಿಧಿ. ಅವರು ಬೋರ್ಡಿನ ನಿರ್ಣಯಕ್ಕೆ ವಿರುದ್ಧವಾಗಿ ಒಂದು ಹಂತದಲ್ಲಿ ನೀರನ್ನು ಬಿಟ್ಟರು, ಬಹುಶ: ಅವರು ಯಾವ ಕಾರಣದಿಂದ ಬಿಟ್ಟರು ಎಂದು ಅನಾವಶ್ಯಕವಾಗಿ ಚರ್ಚೆ ಬೇಡ. ಏಕೆಂದರೆ ಈ ಸಂದರ್ಭದಲ್ಲಿ ನಾನು ಆ ವಿವರಕ್ಕೆ ಹೋಗುವುದಿಲ್ಲ.

ಅವರು ನೀರು ಬಿಟ್ಟಾಗ ನಮ್ಮ ರೈತರು ಮುಂದೆ ಹೋಗಿ ಸ್ವಲ್ಪ ಕಾನೂನು ಹತೋಟಿ ಇಡತಕ್ಕದ್ದು ಕಷ್ಟ ಅಂದಾಗ ನಮ್ಮ ಎಸ್.ಪಿ. ಅವರು ಮತ್ತಿತರ ಅಧಿಕಾರಿಗಳು ಹೋಗಿ (ಸುಮಾರು 120 ಕ್ಯೂಸೆಕ್ಸ್ ನೀರು ಹರಿದಿತ್ತು), ಆ ಗೇಟನ್ನು ಮುಚ್ಚಿಸಿದರು. ಇದನ್ನು ನಾನು ಇಲ್ಲಿಗೆ ನಿಲ್ಲಿಸುತ್ತೇನೆ, ಇದರ ಬಗ್ಗೆ ಬೇರೆ ಚರ್ಚೆ ಬೇಡ. ಅದಾದಮೇಲೆ ತುಂಗಭದ್ರ ಬೋರ್ಡಿನ ಛೇರ್ಮನ್ನರು, ಕಾರ್ಯದರ್ಶಿಗಳು, ಕೇಂದ್ರ ಸರ್ಕಾರದ ಪ್ರತಿನಿಧಿಗಳು, ಆಂಧ್ರ ಪ್ರದೇಶದ ನೀರಾವರಿ ಕಾರ್ಯದರ್ಶಿಗಳು, ನಮ್ಮ ಕಾರ್ಯದರ್ಶಿಗಳು ಎಲ್ಲರೂ ಸೇರಿ ಬೆಂಗಳೂರಿನಲ್ಲಿ ಇದರ ಬಗ್ಗೆ ಸಭೆ ಹೋಯಿತು. ಬೆಂಗಳೂರಿನಲ್ಲಿ ಸಭೆ ಆದಮೇಲೆ ಏಪ್ರಿಲ್ 8 ರವರೆಗೆ ನಮ್ಮ ರೈತರು ಇಟ್ಟಿರತಕ್ಕ ಬೆಳೆಗೆ ಎಷ್ಟು ನೀರು ಬೇಕು ಎಂಬುದನ್ನು ಮೊದಲು ನಾವು ಕಾಯ್ದಿರಿಸಿಕೊಂಡು ಉಳಿದ ನೀರನ್ನು ಬಿಡುವುದು ಎಂಬ ತೀರ್ಮಾನಕ್ಕೆ ಬಂದೆವು. ಅಲ್ಲಿ ವರ್ಕಿಂಗ್ ಟೇಬಲ್ ಪ್ರತಿಯೊಂದು ಎಲ್ಲಾ ಲೆಕ್ಕಾಚಾರ ಮಾಡಿದ್ದಾರೆ. ಆರವರೆಗೆ ನಾವು ಏನು ಗಡುವು ಕೊಟ್ಟಿದ್ದೆವು ಅಲ್ಲಿಯವರೆಗೆ ನಮ್ಗೆ ನೀರು ಕೊಡತಕ್ಕ ಆಶ್ವಾಸನೆ ಮೇರೆಗೆ ನಿರ್ಣಯವಾಯಿತು. ಕೇಂದ್ರದ ಪ್ರತಿನಿಧಿಗಳು, ಆಂಧ್ರದ ಪ್ರತಿನಿಧಿಗಳು, ಹಾಗೂ ನಮ್ಮ ರಾಜ್ಯದ ಪ್ರತಿನಿಧಿಗಳು ಸೇರಿ ಮೀಟಿಂಗ್ ಆಯಿತು. ಅದಾದ ಮೇಲೆ ಮೀಟಿಂಗ್ ಪ್ರೊಸೀಡಿಂಗ್ಸ್ ಕೊಡಿ ನಾನು ಕನ್‌ವಿನ್ಸ್ ಮಾಡುತ್ತೇನೆಂದು ಹೇಳಿದೆ. ಆರವರೆಗೆ ಒಂದು ದಿನ ನೀರು ಕಡಿಮೆಯಾದರೂ ನಾನು ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಆರವರೆಗೆ ನೀರು ಕೊಡುವುದಕ್ಕೆ ಒಪ್ಪಿದ್ದೇವೆ, ನಾವು ನೀರು ಕೊಟ್ಟಿದ್ದೇವೆ. ಈಗ ಬೆಳೆಯನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ, ಒಬ್ಬ ಒಂದು ದಿನ ಇರುತ್ತಾನೆ, ಮತ್ತೊಬ್ಬ 15 ದಿನ ಬಿಟ್ಟು ಇಡುತ್ತಾರೆ, ಏಕಕಾಲದಲ್ಲಿ ಎಲ್ಲರೂ ಬೆಳೆ ಇಡುವುದಿಲ್ಲ. ಕೆಲವು ಕಡೆ ಕ್ರಾಪ್ ಮೆಚ್ಯೂರ್ ಆಗಿದೆ. ಕೆಲವು ಕಡೆ ಮೆಚ್ಯೂರ್ ಆಗಿಲ್ಲ. ಇರಬಹುದು, ಅದರ ಬಗ್ಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅದರೆ ನೀರು ಕೊಡುವುದಕ್ಕೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀರು ಇಲ್ಲದೆ ಫಸಲು ಯಾವ ರೀತಿ ರಕ್ಷಣೆ ಮಾಡುತ್ತೀರಿ? 9 ಟಿ.ಎಂ.ಸಿ ನೀರನ್ನು ಸೀಸನ್‌ನಲ್ಲಿ, ಮಳೆಗಾಲದಲ್ಲಿ ಕೊಟ್ಟರೆ ಪರವಾಗಿಲ್ಲ. ಅದು ಬಿಟ್ಟು ಬೇರೆ ಕಾಲದಲ್ಲಿ ಕೊಟ್ಟರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ರಾಜಕೀಯದಲ್ಲಿ ಬೆಳೆ ಬೆಳೆಸುವುದಕ್ಕಾಗುವಿದಿಲ್ಲ. ಎಷ್ಟು ನೀರು ಇದೆ ಎಂದು ಹೇಳಿದ್ದೇನೆ. ನಾನು ಡಿ.ಸಿ. ಹತ್ತಿರ ಮಾತನಾಡಿದ್ದೇನೆ ಮತ್ತು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಯಾವಾಗ ನಾವು ಈ ನಿರ್ಣಯಕ್ಕೆ ಬರಬೇಕು ಆಗ ಡಿ.ಸಿ. ಹತ್ತಿರ ಚರ್ಚೆ ಮಾಡಿ, ನೀರಾವರಿ ಇಲಾಖಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿ 8ನೇ ತಾರೀಖಿನವರೆಗೆ ನೀರು ಮಾಡತಕ್ಕದ್ದರ ಬಗ್ಗೆ ಎಲ್ಲರ ಸಲಹೆ ತೆಗೆದುಕೊಂಡು ಈ ನಿರ್ಣಯಕ್ಕೆ ಬಂದಿದ್ದೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ಸಮಸ್ಯೆ ಏನೆಂದರೆ ಅವರು ಈಗ 9.2 ಟಿಎಂಸಿ ನೀರನ್ನು ಕೇಳಿದ್ದಾರೆ. ಅದನ್ನು ನೀವು ಬಿಡುವುದಿಲ್ಲವೇ?

ಶ್ರೀ ಹೆಚ್.ಡಿ. ದೇವೇಗೌಡ : ಎಲ್ಲಾ ಅಧಿಕಾರಿಗಳೂ ಸೇರಿ, ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿದ್ದ ಅಗರವಾಲರವರು ಇಲ್ಲಿ ಬಂದು ಚರ್ಚೆ ಮಾಡಿದಾಗ ಅವತ್ತು ಏನು ಡ್ಯಾಂನಲ್ಲಿ ನೀರು ಇತ್ತು ಆನೀರು ಎಷ್ಟು ಎಂಬುದನ್ನು ಬೆಳಿಗ್ಗೆ ಬೇಕಾದರೆ ನಾನು ಒದಗಿಸಿಕೊಡುತ್ತೇನೆ. ಆವತ್ತು ಇದ್ದಂಥ ನೀರಿನ ಪ್ರಮಾಣವನ್ನು ನಾವು ಗೊತ್ತು ಮಾಡಿ ಆಂಧ್ರದಲ್ಲಿರತಕ್ಕ ಬೆಳೆ ಎಷ್ಟಿದೆ, ನಮ್ಮ ಬೆಳೆ ಎಷ್ಟಿದೆ ಎಂಬುದನ್ನು

ನೋಡಿ 8ರವರೆಗೆ ನಾವು ನೀರನ್ನು ಹೇಗೆ ಬಿಡಬೇಕೆಂಬುದನ್ನು ಪ್ರೋರೇಟಾ ಹಂಚಿದ್ದಾರೆ, maintaining the dead line as 8th April. ಎರಡೂ ಕಡೆಗೂ ಆ ದಿನ ಎನು ನಿರ್ಣಯ ತೆಗೆದುಕೊಂಡಿದ್ದಾರೆ, ಅವರಿಗೆ ಎಷ್ಟು ವರ್ಕಿಂಗ್ ಟೇಬಲ್ ಪ್ರಿಸ್ಕ್ರೈಬ್ ಮಾಡಿದ್ದಾರೆ. ನಾಳೆ ಬೆಳಿಗ್ಗೆ ಬೇಕಾದರೆ ಈ ಸಭೆಗೆ ವಿವರ ಕೊಡುತ್ತೇನೆ. ಇದರಲ್ಲಿ ಯಾವುದೂ ಮುಚ್ಚುಮರೆ ಇಲ್ಲ.

SRI H.N, NANJEGOWDA : That is not our point. Whether this working table contemplates letting out of the water, which was not used by Andhra, ie., 9.2 TMCFT under this prohibition. ಹಳೆಯದು ಕೊಡುವುದಕ್ಕೆ ಬಾಕಿ ಇದೆ ಎಂದು ತೋರಿಸಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬ್ಯಾಕ್ ಲಾಗ್ ಕೊಡುತ್ತೀರಾ ಎಂಬುದನ್ನು ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಇಲ್ಲ, ಇಲ್ಲ, ನಾವು ಎರಡು ಟಿ.ಎಂ.ಸಿ ನೀರನ್ನು ಹೇಗೆ ಷೇರ್ ಮಾಡಿಕೊಳ್ಳಬೇಕೆಂದು ಹೇಳಿ.

(ಗೊಂದಲ)

ಶ್ರೀ ಶ್ರೀರಂಗದೇವರಾಯರು : ಲೆಫ್ಟ್ ಬ್ಯಾಂಕ್ ಕೆನಾಲ್‌ಗೆ ವಾಟರ್ ಅನ್ನು ರೈಟ್ ಬ್ಯಾಂಕ್ ಕೆನಾಲಿಗೆ ಒಂದೂವರೆ ಟೈಮ್ಸ್ ನೀರು ಕೊಟ್ಟಿದ್ದೀರಿ. ಲೋಯರ್ ಲೆವಲ್ ಕೆನಾಲ್‌ಗೆ ಇವತ್ತಿಗೂ 850 ಕ್ಯೂಸೆಕ್ಸ್ ನೀರು ಬಿಡುತ್ತಿದ್ದೀರಿ. ರೈತರಿಗೆ ನೀರು ಬಿಡುವುದು ಬೇಡ ಎಂದು ನಾನು ಹೇಳುತ್ತಿಲ್ಲ. ಆದರೆ ನಮಗೂ ಕೊಡಿ ಎಂದು ಕೇಳುತ್ತಿದ್ದೇನೆ. 36ನೇ ಮೈಲೇಜ್‌ಗೆ ನಮಗೆ ಕೋರ್ಟ್ ಆರ್ಡರ್ ಪ್ರಕಾರ ಮೇ 10ರವರೆಗೆ ನೀರು ಕೊಡಬೇಕಾಗಿದೆ. ನಾವು ಹಿಂದೆ ಮೊಯಿಲಿಯವರು ಮುಖ್ಯ ಮಂತ್ರಿಗಳು ಇದ್ದ ಕಾಲದಲ್ಲಿ ಬೆಂಗಳೂರಿನಲ್ಲಿ ಮೀಟಿಂಗ್ ಮಾಡಿದೆವು. ನೀವು ಏನೇ ಮಾಡುವುದಾದರೆ ಜನವರಿಯಲ್ಲಿ ನೋಟಿಫಿಕೇಷನ್ ಹಾಕಬೇಕು, ಜನವರಿಯಲ್ಲಿ ಮೆಟೀರಿಯಲ್ ಎಲ್ಲಾ ಸರಬರಾಜು ಮಾಡಬೇಕು ಎಂದು ಪೇಳಿದೆವು. ಆದರೆ ಇವತ್ತಿನವರೆಗೆ ಏನೂ ಸರಬರಾಜು ಮಾಡಲಿಲ್ಲ. ಮುಂದೆಯಾದರೂ ಮಾಡುತ್ತೀರೋ ಇಲ್ಲವೋ ಅನ್ನಿಸುತ್ತದೆ. ಇವತ್ತು ನಮಗೆ ನೀರಿಗೆ ಬಡತನವಾಗಿದೆ. ಮಾನ್ಯ ನಾಯಕರು ಹೇಳಿದ ಹಾಗೆ ಒಂದೂವರೆ-ಎರಡು ಟಿಎಂಸಿ ನೀರು ರೈಟ್ ಬ್ಯಾಂಕ್ ಕೆನಾಲ್‌ನಿಂದ ಏನು ಕೊಟ್ಟಿದ್ದೀರಿ ಅದನ್ನು ನಮಗೆ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾವು ಈಗಾಗಲೇ ಸರ್ಕಾರಿ ಆಜ್ಞೆ ಹೊರಡಿಸಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಇರುವ ವಿಷಯವನ್ನು ಸತ್ಯಾಂಶವನ್ನು ಸಭೆಗೆ ಮರೆಮಾಚಬೇಕಾಗಿಲ್ಲ. ಮಾನ್ಯ ನಂಜೇಗೌಡರು ಪ್ರತಿ ವರ್ಷ ನಾಳೆ ಒಡೆಯುತ್ತದೆಂದು ಹೇಳಿದರು. ಇನ್ನರ್‌ಸ್ಟ್ರಂಗ್ಥನ್ ನಮ್ಮ ಕಾಲದಲ್ಲಿ ಎಲ್ಲೆಲ್ಲಿ ಮಾಡಿದೆವು ಆ ಭಾಗದಲ್ಲಿ ಇವತ್ತಿನವರೆಗೆ ಒಂದು ನಾಲೆ ಕೂಡ ಒಡೆದಿಲ್ಲ. 5 ವರ್ಷದ ವಿಷಯವನ್ನು ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾವು ಏನು 6 ವರ್ಷದೊಳಗೆ ಇನ್ನರ್ ಸ್ಟ್ರೆಂಗ್ಥನಿಂಗ್ ಶ್ರೀ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಅವರು ಕೊಟ್ಟಂಥ ಸಲಹೆ ಮೇರೆಗೆ ಇನ್ನರ್ ಸ್ಟ್ರಂಗ್ಥನಿಂಗ್ ಮಾಡಿದ್ದೇನೆ. ಅದು ಯಾವುದೂ ಕೂಡ ಇವತ್ತಿನವರೆಗೆ ಬರೆದಿಲ್ಲ. ಈ ಮಾತನ್ನು ಮತ್ತೊಂದು ಸಾರಿ ಹೇಳುತ್ತೇನೆ. ಇತ್ತೀಚೆಗೆ ಏನಾಗಿದೆ ಎಂದು ವಿವರಣೆ ಕೊಡಬೇಕೆಂದರೆ ಕೊಡುತ್ತೇನೆ. ಇವತ್ತು ನಾವು ಇನ್ನರ್ ಸ್ಟ್ರಂಗ್ಥನಿಂಗ್ ಎಲ್ಲೆಲ್ಲಿ ಮಾಡಬೇಕೆಂಬುದರ ಬಗ್ಗೆ

ತೀರ್ಮಾನ ತೆಗೆದುಕೊಂಡಿದ್ದೇನೆ. The work is going to be started sufficient. Money is also going to be provoided. ಅವರ ಷೆಡ್ಯೂಲ್ ಏನಿದೆ ಅದರ ಪ್ರಕಾರವು ಕೆಲಸ ಮಾಡಿಸುವುದಕ್ಕೆ ಈ ಸದನದಲ್ಲಿ ಭರವಸೆ ಕೊಡುತ್ತೇನೆ. 9.2 ಟಿಎಂಸಿ ನೀರು ಬಿಡತಕ್ಕ ಪ್ರಶ್ನೆಯನ್ನು ಹೇಳುತ್ತೀರಿ. ಅವತ್ತು ಕೇಂದ್ರ ಸರ್ಕಾರ ಸೂಚನೆ ಮೇಲೆ, (ಇದರಲ್ಲಿ ರಾಜಕೀಯ ಬೆರಸುವ ಅವಶ್ಯಕತೇ ಇಲ್ಲ) ಒಂದು ಹಂತಕ್ಕೆ ತೀರ್ಮಾನ ತೆಗೆದುಕೊಂಡೆವು. ಅದಾದ ಮೇಲೆ ಕೇಂದ್ರದ ಅಧಿಕಾರಿಗಳು ಯಾವಾಗ ಬಂದರು, ಮತ್ತೆ Board Chairman who is representing Govt. of India:

ನಮ್ಮ ರಾಜ್ಯದಲ್ಲಿ ಬಂದು ಕುಳಿತುಕೊಂಡು ಚರ್ಚೆ ಮಾಡಿ ಆರವರೆಗೆ ಎಷ್ಟು ನೀರು ಬೇಕೆಂದು ಲೆಕ್ಕ ಹಿಡಿದು ಉಳಿದದ್ದು ಅವರಿಗೆ ಕೊಡತಕ್ಕದ್ದು ಎಂದು ತೀರ್ಮಾನ ಮಾಡಿದೆವು. ನಮ್ಮ ರಿವರ್‌ನಲ್ಲಿ ಹೇಗೆ ಇನ್‌ಫ್ಲೋ ಬಿಡುತ್ತಿದ್ದೆವೋ, ಅದು 1400-1500 ಕ್ಯೂಸೆಕ್ಸ್ ನೀರು ಹೋಗುತ್ತಿತ್ತು. ಅದನ್ನು 700-750ಕ್ಕೆ ರೆಡ್ಯೂಸ್ ಮಾಡಿ ಮತ್ತೆ ಕರ್ನಾಟಕದಿಂದ ಬೇರೆ ಕಡೆಗೆ ಡೈವರ್ಷಿಫೈ ಆಗುತ್ತದೆ. ಈಗ ಆ ಕಡತ ನನ್ನ ಮುಂದೆ ಇಲ್ಲ. ಇರುವ ವಿಚಾರ ಹೇಳುತ್ತಿದ್ದೇನೆ. ಆ ಕಾರಣದಿಂದ ಅವರು ಕೊಟ್ಟಂಥ ಒಂದು ವರ್ಕಿಂಗ್ ಟೇಬಲ್ ಏನಿದೆ ಅದನ್ನು ನಮ್ಮ ಅಧಿಕಾರಿಗಳು ಪುನ: ಸ್ಕ್ರುಟಿನಿ ಮಾಡಿ ಆರವರೆಗೆ ನೀರನ್ನು ಕಾಯ್ದಿಟ್ಟುಕೊಳ್ಳತಕ್ಕ ಜವಾಬ್ದಾರಿಮೇಲೆ ಎರಡೂ ಕಡೆ ಒಂದು ಸರ್ವ ಸಮ್ಮತವಾದ ತೀರ್ಮಾನಕ್ಕೆ ಬಂದರು. 0.8 ಟಿ.ಎಂ.ಸಿ ಒಂದು ಕಡೆಗೆ, 1.6 ಟಿಎಂಸಿ ಇನ್ನೊಂದು ಕಡೆಗೆ. ಹೀಗೆ ನಾವು ಹಂಚಿಕೊಳ್ಳಬೇಕೆಂದು ನಿರ್ಣಯವಾಗಿದೆ. ಆ ನಿರ್ಣಯದ ಪ್ರಕಾರ ಒಪ್ಪಿಗೆಯಾಗಿ ಕೇಂದ್ರ ಸರ್ಕಾರದ ಪ್ರತಿನಿಧಿ ಮುಂದೆ ಇಂಟರಿಂ ಅರೇಂಜ್‌ಮೆಂಟ್ ಆಗಿದೆ, ಅಗ್ರಿಮೆಂಟ್ ಅಲ್ಲ. ಪರಿಸ್ಥಿತಿ ಏನಾಗಿದೆ ಎಂದರೆ ಕೆನಾಲ್ ಬೆಡ್ ಲೆವೆಲ್ 1260ಕ್ಕೆ ಇದೆ, ನಾವು ಇರತಕ್ಕ ನೀರನ್ನು ಬಿಡುತ್ತೇವೆಂದರೂ ಈಗ ಡೈವಿಂಗ್ ಹೆಡ್ ಇಲ್ಲ. ನೀರು ಹೋಗುವುದಿಲ್ಲ. ಮೂರು ಕೆನಾಲ್, ಲೋ ಲೆವೆಲ್ ಮತ್ತು ರೈಟ್ ಬ್ಯಾಂಕ್ ಕೆನಾಲ್ ಡಿಫರೆಂಟ್ ಲೆವಲ್‌ನಲ್ಲಿ ಇದೆ. ಮಾನ್ಯ ನಂಜೇಗೌಡರಿಗೆ ವಿಷಯ ಗೊತ್ತಾಗುತ್ತದೆ. ಅಲ್ಲಿ ಡೈವಿಂಗ್ ಹೆಡ್ ಇಲ್ಲ. ಇನ್ನೊಂದು ನೀವೇ ನಿರ್ಣಯ ಮಾಡಿದ್ದೀರಿ. ಮತ್ತೆ ಹೇಳುತ್ತೀರಿ ನಾವು ಬಂದಮೇಲೆ ಬರೆದುಕೊಂಡೆವು ಎಂದು ಹೇಳಿ ಅವರೇ ನಿರ್ಣಯ ಮಾಡಿದ್ದಾರೆ. ಕಬ್ಬಿಗೆ 8 ಸಾವಿರ ಎಕರೆಗೆ ನೀರನ್ನು ಕಾಯ್ದಿಡಬೇಕೆಂದು ತೀರ್ಮಾನ ಮಾಡಿದ್ದಾರೆ. ಕಬ್ಬಿಗೆ ಕಾಯ್ದಿರತಕ್ಕ ನೀರನ್ನು ಬಿಡಬೇಕೆಂದರೆ ನಾನು ಮೂರು ದಿನದಲ್ಲಿ ಬಿಡುತ್ತೇನೆ. ಅವರು ಹೇಳಲಿ ಹಾಗೆ. ನೀವೇ ತೀರ್ಮಾನ ಮಾಡಿಕೊಳ್ಳುತ್ತೀರಾ? ಸರ್ಕಾರ ಮಾಡಲಿಲ್ಲವೆಂದರೆ ನಾನು ಏನು ಮಾಡಬೇಕು? ಇದು ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಪರಿಪಾಠಗಳು ಇವು. ನಾವು ಇಲ್ಲಿಯವರೆಗೆ ಸಾಧ್ಯವಾದ ಮಟ್ಟಿಗೆ ರೈತರಿಗೆ ಅನಾನುಕೂಲ ಮಾಡಬಾರದೆಂದು ಮಾಡಿದ್ದೇವೆ. ಯಾವುದೇ ಸರ್ಕಾರ ಇರಲಿ ಹೆಚ್ಚು ಕಡಿಮೆ ಸುಧಾರಣೆ ಮಾಡಿಕೊಂಡು ಬಂದಿದ್ದೇವೆ. ಕಬ್ಬಿಗೆ 28-5-1995ರಿಂದ 4-6-1995ರವರೆಗೆ ಒಂದು ಬಾರಿ ನೀರನ್ನು ಬೆಳೆದು ನಿಂತಿರುವ ಕಬ್ಬಿನ ಬೆಳೆಗೆ ಹೊರತುಪಡಿಸಿ ಎಂದು ಹೇಳಿದ್ದೇವೆ. ನಾನು ಬಿಡು ಎಂದರೆ ಮೂರ್ನಾಲ್ಕು ದಿನ ಬಿಡುತ್ತೇನೆ. ಈ ಬಗ್ಗೆ ಇಂದು ಬೆಳಿಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಏಕೆಂದರೆ ಇಲ್ಲಿ ವಿಷಯ ಪ್ರಸ್ತಾಪ ಮಾಡುತ್ತಾರೆಂದು ಗೊತ್ತು. ಈಗ ಅಧಿಕಾರಿಗಳು ಬೇರೆ ಮೀಟಿಂಗ್‌ಗೆ ಹೋಗಿದ್ದಾರೆ. The problem is we must preserve that water. ಆ ಪರ್ಟಿಕ್ಯುಲರ್ ಪೀರಿಯಡ್‌ಗೆ ನೀರು ಬಿಡಲೇಬೇಕು. ಕಬ್ಬನ್ನು ಉಳಿಸಿ ಎಂದು ಇವರೇ ರೆಸಲ್ಯೂಷನ್ ಮಾಡಿಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಕ್ಯಾಪ್ ಪ್ಯಾಟರ್ನ್‌ನ್ನು ಮತ್ತೆ ಏತಕ್ಕೆ ಎನ್‌ಫೋರ್ಸ್ ಮಾಡುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ : ನೀವೂ ಇದ್ದಿರಿ. ಎನ್‌ಫೋರ್ಸ್ ಹೇಗೆ ಮಾಡೋಣ ಎಂದು ಆಲೋಚನೆ ಮಾಡೋಣ. ಇರತಕ್ಕಂಥ ವಾಸ್ತವಾಂಶವನ್ನು ನಾನು ಸಭೆಯ ಮುಂದೆ ತಿಳಿಸಿದ್ದೇನೆ. ಸ್ವಾಮಿ, ಇದಕ್ಕಿಂತ ಮತ್ತೇನೂ ಹೆಚ್ಚು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಮಾತನ್ನು ತಾವು ಒಪ್ಪಿಕೊಂಡ ಹಾಗೆ ಆಯಿತಲ್ಲ. ಏನೆಂದರೆ ಅವರು ಕೆನಾಲ್ ದುರಸ್ತಿ ಮಾಡುವ ಸಲುವಾಗಿ ಅವರು ನೀರನ್ನು ಎಷ್ಟು ಬಳಸಿಕೊಳ್ಳಬೇಕಾಗಿತ್ತೋ ಅಷ್ಟು ಬಳಸಿಕೊಂಡಿಲ್ಲ. ಈಗ ಅವರು ಕೇಳಿದರು, ಅದಕ್ಕೆ ನಾವು ಬಿಟ್ಟಿದ್ದೇವೆ ಎಂದು ಒಂದು ಮಾತನ್ನು ತಾವು ಹೇಳಿದ್ದೀರಿ. 9 ಟಿಎಂಸಿ ನೀರು ಏನು ಅವರಿಗೆ ಸಿಗಬೇಕಾಗಿತ್ತು ಅವರ ಕೆನಾಲ್ ರಿಪೇರಿ ಇದ್ದ ಕಾರಣ ಅದನ್ನು ಬಿಡುವುದಕ್ಕಾಗುವುದಿಲ್ಲ, ಈಗ ದುರಸ್ತಿ ಆದಮೇಲೆ ಆ ನೀರನ್ನು ಬಿಡಬೇಕು ಅನ್ನತಕ್ಕದ್ದು ಬಂದಮೇಲೆ ಈಗ ನಾವು 2 ಟಿಎಂಸಿ ನೀರನ್ನು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. 1.6 ಎಂದು ತಾವು ಹೇಳುತ್ತೀರಿ, ಅವರು 2 ರಂದು ಹೇಳುತ್ತಾರೆ. ಅಂದರೆ ಇದೇನಾಗಿದೆ ಅಂದರೆ ಅಧ್ಯಕ್ಷರೇ ಹೆಚ್ಚು ಕಡಿಮೆ ಬ್ಯಾಕ್‌ಲಾಗ. ಅಂದರೆ ಯಾವ ಕಾಲಕ್ಕೆ ಅವರಿಗೆ ನೀರು ಕೊಡಬೇಕಾಗಿತ್ತು ಅದನ್ನು ಕೊಟ್ಟಿದ್ದರೆ ಈ ಪರಿಸ್ಥಿತಿ ಇವರಿಗೆ ಬರುತ್ತಿರಲಿಲ್ಲ. ಈ ಸಂದರ್ಭದಲ್ಲಿ ನಮಗೆ ಬೇಕಾದಂಥ ನೀರು ಅವರಿಗೆ ಕೊಟ್ಟಿದ್ದಾರೆ ಎಂಬ ದೂರು ಇದೆ. ನಾನು ಲೋಕಲ್‌ನಲಿಲ್ಲ. ಆದರೆ ಅನೇಕ ಶಾಸಕರು ಮತ್ತು ಅಲ್ಲಿನ ರೈತರು ಹೇಳತಕ್ಕದ್ದು ಏನೆಂದರೆ ಬ್ಯಾಕ್‌ಲಾಗ್ ಸಿಸ್ಟಂ ಮಾಡಿಕೊಂಡು ಅವರಿಗೆ ಬಿಟ್ಟಿದ್ದಕ್ಕಾಗಿ ನಮಗೆ ತೊಂದರೆಯಾಗಿದೆ, ಮತ್ತು ತಾವು ಹೇಳಿದ ಹಾಗೆ ಮೂರೂ ಕೆನಾಲ್ ಬೇರೇಬೇರೇ ಲೆವೆಲ್‌ನಲ್ಲಿ ಇದ್ದ ಕಾರಣ ಸಹಜವಾಗಿ ಲೋ ಲೆವೆಲ್ ಕೆನಾಲ್‌ಗೆ ನೀರು ಹೋಗಿಲ್ಲ. ಇವರು ಬಿಡಬೇಕೆಂದು ಮನಸ್ಸು ಮಾಡಿದರೂ ಕೂಡ ಸ್ವಲ್ಪ ತೊಂದರೆಯಾಗುತ್ತದೆ. ಅದಕ್ಕೆ ಅವರು ಕನಿಷ್ಟ ಪಕ್ಷ 8ದಿವಸವಾದರೂ ಕೊಡಿ ಎಂದು ಹೇಳುತ್ತಾರೆ. 15ನೇ ತಾರೀಖಿನವರೆಗೆ ಆದೇನಾದರೂ ವ್ಯವಸ್ಥೆ ಮಾಡುವುದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಳ್ಳಿ. ಟೆಂಪೊರರಿಯಾಗಿ. ರಾತ್ರಿಯಾದರೂ ಬಿಡಿ, ಹಗಲಾದರೂ ಬಿಡಿ ಏನಾದರೂ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ನಿಮಗೆ ರೈತರ ಮೇಲೆ ಕಳಕಳಿ ಇದೆ. ನಮಗೆ ಕಳಕಳಿ ಇಲ್ಲ ಎನ್ನತಕ್ಕ ವಾದ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜಿನ ಖರ್ಗೆ : ಇಲ್ಲ ಎಂದು ನಾವು ಹೇಳಲೇ ಇಲ್ಲವಲ್ಲಾ, ಎಲ್ಲರೂ ರೈತರ ಹೆಸರೇ ಹೇಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ : ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗಿದ್ದರು. ಮೂರು ಕೆನಾಲ್‌ನಲ್ಲಿ ಕೆಲವು ಕೆನಾಲ್ ಮಾರ್ಜಿಗೆ ಕ್ಲೋಸ್ ಮಾಡುತ್ತಾರೆ. ಪ್ರತಿ ವರ್ಷ ಹಿಂದಿನಿಂದ ನಡೆದುಕೊಂಡು ಬಂದಿರತಕ್ಕಂಥದ್ದು. ನಾವೇನೂ ಹೊಸದಾಗಿ ಮಾಡಿಲ್ಲ,, ಅದನ್ನು, ಇವರು ಅನೇ ತಾರೀಖು ಡೆಡ್ ಲೈನ್ ಕೊಟ್ಟು ನೋಟಿಫಿಕೆಷನ್ ಏನು ಮಾಡಿದ್ದಾರೆ ಅದು ಈ ವರ್ಷ ಮಾತ್ರವಲ್ಲ. ಹಿಂದಿನಿಂದ ನಡೆದುಕೊಂಡು ಬಂದಿರುವಂಥದ್ದು.

ಶ್ರೀ ಶ್ರೀರಂಗದೇವರಾಯಲು : 1978ನಿಂದ ಏಪ್ರಿಲ್ ಲಾಸ್ಟ್ ವೀಕ್‌ವರೆಗೂ ನಾವು ನೀರು ಕೊಡುತ್ತಿದ್ದೇವೆ. ಆಪ್ಟು ರಾಯಚೂರಿನವರೆಗೆ,

ಶ್ರೀ ಎಚ್.ಡಿ. ದೇವೇಗೌಡ : ಇನ್ನರ್ ಸ್ಟೆಂಗ್ಥಂಗ್ ಮಾಡುವುದಕ್ಕೆ ಮೂರು ವರ್ಷ ಕಾಲ ನಾನೇ ನಿಲ್ಲಿಸಿದ್ದೇವೆ. ಇನ್ನರ್ ಸ್ಟೆಂಗ್ಥನಿಂಗ್‌ಗೆ 75 ದಿವಸ ಬೇಕು ಅವಧಿ ಮಂದು ಹೇಳಿದಾಗ ನಾವೇ ಎಲ್ಲಾ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಲಿಕ್ಕೋಸ್ಕರವಾಗಿ ನಾವೇ ನಿಲ್ಲಿಸಿರತಕ್ಕದ್ದು ಬೇಕಾದರೆ ನಾನು ಅಂಕಿಅಂಶ ಕೊಡುತ್ತೇನೆ. ಯಾವ ತಾರೀಖು ನಿಲ್ಲಿಸಿದ್ದೇವೆ ಎಂದು. ಇದೇನೂ ಹೊಸದಲ್ಲ. ಇನ್ನರ್‌ಸ್ಟೆಂಗ್ಥನಿಂಗ್ ವರ್ಕ್ ಆಗಬೇಕೆಂದು ಹೇಳಿ ನೋಟಿಫಿಕೇಷನ್ ಹಾಕಿಸಿ ಪತ್ರಿಕಾ ಪ್ರಕಟಣೆ ಕೊಟ್ಟು ಹಿಂದೆ ಮಾಡಿದ್ದೇವೆ. ಇವತ್ತು ಈಗ ಆಂಧ್ರದ ಪ್ರಶ್ನೆ ಅಲ್ಲ. ಡಿಸೆಂಬರ್ 1994ರಲ್ಲಿ ಕನ್‌ಸ್ಟೇಟೀವ್ ಕಮಿಟಿ ಮೀಟಿಂಗ್ ಯಾವಾಗ ಆಯಿತೋ ಆಗ ಇವರೆಲ್ಲಾ ಒಪ್ಪಿಕೊಂಡಿದ್ದರೆ. ಈಗ ಮತ್ತೆ ಹೇಳುತ್ತಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ, ತಾವು ಹೇಳುವುದನ್ನು. ಕ್ರಾಪನ್ನು ಇಡುವಾಗ ಎಲ್ಲಾ ಒಂದೇ ಸಾರಿ ಇಡುವುದಿಲ್ಲ. ಯಾರೋ ಒಬ್ಬ ತಡವಾಗಿ ಇಟ್ಟುಕೊಳ್ಳುತ್ತಾನೆ. ಹೀಗಾಗಿ ಯೂನಿಫಾರಂ ಆಗಿ ಇದು ರೈಪ್ ಆಗಿರುವುದಿಲ್ಲ. ಕೆಲವು ಕಡೆ ಪ್ರಾಬ್ಲಂ ಇಡಬಹುದು. ಆದರೆ 2ಲಕ್ಷ ಎಕರೆಯಲ್ಲಲ್ಲ.

ಶ್ರೀ ಎಚ್.ಎನ್. ನಂಜೇಗೌಡ : ಈಗ ಗುಟ್ಟಾಗಿ ನೀವು ಆಂಧ್ರಕ್ಕೆ ನೀರು ಬಿಟ್ಟಿಲ್ಲ ಎಂದು ನಾವು ಅಂದುಕೊಳ್ಳಬಹುದೇ?

ಶ್ರೀ ಎಚ್.ಡಿ. ದೇವೇಗೌಡ : ಇಲ್ಲ, ಇಲ್ಲ, ನಾನು ಹೇಳಿದ್ದೇನೆ. ಮೊದಲೇ 2 ಟಿ.ಎಂ.ಸಿ ರಿವರ್‌ಗೆ ಹೋಗತಕ್ಕ 1500 ಕ್ಯೂಸೆಕ್ಸ್‌ನಲ್ಲಿ 750 ಕ್ಯೂಸೆಕ್ಸ್‌ಗೆ ರೆಡ್ಯೂಸ್ ಮಾಡಿ ಬಂದಂಥ ಸೇವಿಂಗ್ಸ್ ತೋರಿಸಿ 1.6 ಟಿ.ಎಂ.ಸಿ. ನೀರು ಬಿಟ್ಟಿರತಕ್ಕದ್ದು.

ಶ್ರೀ ಕಾಗೋಡು ತಿಮ್ಮಪ್ಪ : ಅವರಿಗೆ ಬೇಕಾಗಿರುವುದು ಅಲ್ಲಿ ಕ್ರಾಫ್ ಇದೆ. ಅದನ್ನು ಉಳಿಸುವುದಕ್ಕೆ ಏನಾದರೂ ಉಪಾಯ ಕಂಡುಹಿಡಿದು ಅದಕ್ಕೆ ನೀರು ಬಿಡಿಸಿ. ಅದು ಯಾವ ತರಹ ಮಾಡುತ್ತೀರೋ . ಅದು ನಿಮಗೆ ಬಿಟ್ಟಿದ್ದುದು. ಆ ಲೆಕ್ಕಾಚಾರ ಎಲ್ಲಾ ಆಮೇಲೆ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಟ್ಯಾಂಡಿಂಗ್ ಕ್ರಾಪನ್ನು ಉಳಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿ.

ಶ್ರೀ ಶ್ರೀರಂಗದೇವರಾಯಲು : ನನಗೆ ಗಂಗಾವತಿಯಿಂದ ಬಂದ ಮಾಹಿತಿ ಪ್ರಕಾರ ಬಹಳ ತೊಂದರೆಯಾಗಿದೆ ರೈತರಿಗೆ. ನಾವು ಗಂಗಾವತಿಗೆ ಹೋಗುವುದೆ ಕಷ್ಟವಾಗಿದೆ. ನನಗೆ ಟೆನ್‌ಷನ್ ಆಗಿದೆ ಸಾರ್. ದಯಮಾಡಿ ಏನಾದರೂ ಪರಿಹಾರ ಮಾಡಬೇಕು. ಇಲ್ಲದಿದ್ದರೆ ನಾನು ಗಂಗಾವತಿಗೆ ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ : ಹೈ ಲೆವೆಲ್ ಇದ್ದಾಗ ಏನು ಮಾಡುವುದಕ್ಕಾಗುತ್ತದೆ? ಹೇಗೆ ಮಾಡುವುದಕ್ಕಾಗುತ್ತದೆ? ನೀವು ಮಾಡಿ ತೋರಿಸಿ. ಸುಮ್ಮನೆ ಬುರುಡೆ ಹೊಡೆಯುವುದಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 20ನೇ ತಾರೀಖಿನವರೆಗೂ ಮಾಡಿದ್ದರೆ. ಕೇಳಿ ಅವರಿಗೆ. ನೀವು ಎರಡು ಟಿ.ಎಂ.ಸಿ. ನೀರು ಅವರಿಗೆ ಕೊಟ್ಟಮೇಲೆ ನೀರು ಎಲ್ಲಿಂದ ಸಿಗುತ್ತದೆ?

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಇದೇ ರೀತಿಯ ಗಾಂಭೀರ್ಯತೆಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮೂಲಕ ಕೇಳುತ್ತೇನೆ.

ವಿಶ್ವೇಶ್ವರಯ್ಯ ಕೆನಾಲ್‌ನ ಪ್ರದೇಶದಲ್ಲಿರತಕ್ಕ ಬೇಸಿಗೆ ಬೆಳೆಗೆ ಕೂಡ ನೀರಿನ ಕೊರತೆ ಇದೆ. ಅವರಿಗೆ ಸಂಪೂರ್ಣ ಅರಿವಿದೆ. ಹೇಮಾವತಿಯಾಂದ ನೀರನ್ನು ಬಿಡದೇ ಹೋದರೆ ಸಂಪೂರ್ಣವಾಗಿ ಬೇಸಿಗೆ ಬೆಳೆ ಹಾಳಾಗಿಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಇದಾಗಲಿ, ಆಮೇಲೆ ವಿಶ್ವೇಶ್ವರಯ್ಯ ಕೆನಾಲ್ ತೆಗೆದುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೇನಾದರೂ ಪರಿಹಾರ ಮಾಡಿ. ಏನಾದರೂ ಇದರ ಬಗ್ಗೆ ಹೇಳಿ.

ಶ್ರೀ ಎಚ್.ಎನ್. ನಂಜೇಗೌಡ : ಕಂಬೈಂಡ್ ವರ್ಕಿಂಗ್ ಟೇಬಲ್ ಮಾಡಿ ಎನಾದರೂ. ಮಾಡಿ ಆ ಕ್ರಾಪ್‌ಗೆ ನೀರು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಕಾದರೆ ಆಂಧ್ರದಲ್ಲಿ ಒಂದು ಮೀಟಿಂಗ್‌ಮಾಡಿ.

ಶ್ರೀ ಎಚ್.ಡಿ. ದೇವೇಗೌಡ : ಭದ್ರಾದಲ್ಲಿ 4 ಟಿ.ಎಂ.ಸಿ. ನೀರಿದೆ. ನಾನು ಅದನ್ನೂ ಲೆಕ್ಕ ಹಾಕಿದ್ದೇನೆ. ನನಗೂ ರೈತರ ಬಗ್ಗೆ ಕಳವಳಿ ಇದೆ. ಭದ್ರಾದಲ್ಲಿ ನಾವು ಒಂದು ಟಿ.ಎಂ.ಸಿ. ನೀರು ಹೊರಗೆ ತೆಗೆಯುತ್ತೇವೆ ಎಂದರೆ ಜನ ಪ್ರತಿಭಟನೆ ಮಾಡುವ ವಿಷಯ ಒಂದು ಕಡೆ ಇರಲಿ, ಅಲ್ಲಿಂದ ಭದ್ರಾದಿಂದ ತುಂಗಭದ್ರಾಕ್ಕೆ ಬರುವುದರೊಳಗೆ ಮಧ್ಯೆಮಧ್ಯೆ ಇರತಕ್ಕ ಹೊಂಡಗಳಲ್ಲಿ ನೀರು ತುಂಬಿಕೊಂಡು ಕೊನೆಯಲ್ಲಿ ರೀಚ್ ಆಗಬೇಕಾದರೆ 1/4 ಟಿ.ಎಂ.ಸಿ. ನೀರೂ ಕೂಡ ಬಂದು ರಿಸರ್ವಾಯರ್‌ಗೆ ಮುಟ್ಟುವುದಿಲ್ಲ. ಇದೆಲ್ಲಾ ಅಧಿಕಾರಿಗಳ ಜೊತೆ ನಾನು ಕುಳಿತುಕೊಂಡು ಲೆಕ್ಕಾಚಾರ ಮಾಡಿಸಿದ್ದೇನೆ. ಬೇಜವಾಬ್ದಾರಿಯಿಂದ ನಾನು ಈ ಸಭೆಗೆ ಬಂದು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ರೈತರ ಬಗ್ಗೆ ನನಗೂ ಕಳವಳಿ ಇದೆ. ಆದರೆ ಏನು ಮಾಡಬೇಕು ಈಗ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಪರಿಹಾರ ಕಂಡುಹಿಡಿಯಿರಿ.

ಅಧ್ಯಕ್ಷರು : ತಿಮ್ಮಪ್ಪನವರೇ, ನೀವೂ ಅನುಭವಸ್ಥರು, ಅಲ್ಲಿದ್ದರಲ್ಲಾ ಮೊದಲು ಅವರು ನೀವು ಕುಳಿತು ಖಾಸಗಿಯಾಗಿ ಏನಾದರೂ ಮಾಡಿ ಪರಿಹಾರ ಕಂಡುಹಿಡಿಯಿರಿ. ಎಲ್ಲಾ ರೆಕಾರ್ಡ್‌ಗೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಅಶಿಸ್ತು ಎನ್ನತಕ್ಕದ್ದು ಬೆಳೆದು ನಿಂತುಬಿಟ್ಟಿದೆ. ಅದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಕಡೆ ಅದು ಆಗಿಬಿಟ್ಟಿದೆ. ಆ ಸಿದ್ಧಾಂತವನ್ನು ಒಬ್ಬರಿಗೇ ಅನ್ವಯಿಸುವುದಕ್ಕಾಗುವುದಿಲ್ಲ. ಇಡೀ ನೀರಾವರಿ ಪ್ರದೇಶದಲ್ಲೆಲ್ಲಾ ಆಗಿಬಿಟ್ಟಿದೆ. ಈಗ ಎಲ್ಲಾ ಚರ್ಚೆ ಮಾಡುವುದು ಅನಾವಶ್ಯಕ. ಈಗ ಅವರು ಯಾವರೀತಿ ಮಾಡುತ್ತಾರೋ ನಮಗೆ ಗೊತ್ತಿಲ್ಲ. ಈಗ ಬೆಳೆ ಬಂದುಬಿಟ್ಟಿದೆ. ಉಳಿಸಿದರೆ ರಕ್ಷಣೆ ಯಾಗುತ್ತದೆ. ಸಂಪೂರ್ಣ ಜವಾಬ್ದಾರಿ ಹೊತ್ತು ಯಾವರೀತಿ ಆದರೂ ಮಾಡಲಿ. ಆಂಧ್ರಕ್ಕೆ ಕೊಡುವುದರಲ್ಲಿ ಉಳಿಸುತ್ತಾರೋ ಅಥವಾ ಇಲ್ಲೇ ಏನಾದರೂ ಮಾಡಿ ಒಟ್ಟಿನಲ್ಲಿ ಬಡಾಮಣೆ ಮಾಡತಕ್ಕ ಕೆಲಸ ಮಾಡಬೇಕು ಅಷ್ಟೆ.

ಶ್ರೀ ಜಿ.ಬಿ. ಶಿವಕುಮಾರ್ : ಸನ್ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ಒಂದು ನಿಮಿಷ ಶಿವಕುಮಾರ ಅವರೇ ನಾಳೆ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ ಮುಖ್ಯಮಂತ್ರಿಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಏನಾದರೂ ಒಂದು ಪರಿಹಾರ ಹೇಳಲಿ.

ಶ್ರೀ ಜಿ.ಬಿ. ಶಿವಕುಮಾರ್ : ರೈತರ ಸಮಸ್ಯೆಗೆ ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಬೇಸಿಗೆ ಬೆಳೆಗೆ ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಬಿಡಬೇಕು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳೇ ಏಕೆ? ಏನೋ ನೋಡುತ್ತಿದ್ದಾರೆ. ನೋಡಿ ಹೇಳುತ್ತೀರಾ? ನಿಜವಾಗಿಯೂ 2 ಲಕ್ಷ ಎಕರೆಗೆ ಕಷ್ಟ ಇದೆ. ಪಾಪ ಶ್ರೀರಂಗದೇವರಾಯಲು ಅವರು ಎಂದೂ ಕೂಡ ಈ ಸದನದಲ್ಲಿ ಅನಾವಶ್ಯಕವಾಗಿ ಯಾವುದೇ ಕೇಳತಕ್ಕದ್ದಾಗಲೀ ಹಠ ಹಿಡಿಯತಕ್ಕದ್ದಾಗಲೀ ರಾಜಕೀಯ ದುರುದ್ದೇಶದಿಂದ ಪ್ರಶ್ನೆ ಕೇಳತಕ್ಕದ್ದಾಗಲೀ ಅವರು ಮಾಡುವುದಿಲ್ಲ. ಅವರು ಸ್ವತಃ ನೋಡಿಕೊಂಡು ಬಂದು ಈ ಪ್ರಶ್ನೆಯನ್ನು ಅವರು ಕೇಳುತ್ತಿದ್ದಾರೆ. ಪ್ರಕಾಶ್ ಅವರಿಗೆ ಸರಿಯಾಗಿದೆ. ಏಕೆಂದರೆ ಅಲ್ಲಿ ಸ್ವಲ್ಪ ಅನುಕೂಲ ಆಗಿದೆ. ಹತ್ತಿರ ಇದೆ. ಆದರೆ ಪಾಪ ರಾಯಚೂರಿನವರಿಗೂ ಸ್ವಲ್ಪ ಅನುಕೂಲ ಮಾಡಿಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಎಲ್.ಎಲ್.ಸಿ.ಗೂ ಕೂಡ ನೀರು ಕಡಿಮೆಯಾಗಿರುವುದರಿಂದ ಸಂಪೂರ್ಣವಾಗಿ ನಾವು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಚ್.ಎಲ್.ಸಿ.ಯಲ್ಲಿ ನೀರು ಬಿಟ್ಟಿದ್ದರಿಂದ ನಮಗೆ ಅನುಕೂಲವಾಗಿದೆ ಒಪ್ಪಿಕೊಳ್ಳುತ್ತೇನೆ. ಎಲ್.ಬಿ.ಸಿ. ಕೆನಾಲ್‌ದು ರೂಯಚೂರಿನದು ಆದಮೇಲೆ ನಮಗೆ ಎಲ್.ಎಲ್.ಸಿ. ಯಲ್ಲಿ ನೀರು ಬರುತ್ತದೆ.

ಅಧ್ಯಕ್ಷರು : ನೀವು ದಯವಿಟ್ಟು ಅವರನ್ನು ಮಿಟ್ ಮಾಡಿ ಮಾತನಾಡಿಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. : ಇಲ್ಲೇ ಹೇಳಿದರೆ ಏನಾದರೂ ಮಣಿಯುತ್ತಾರೆ. ಹೊರಗಡೆ ಆದರೆ ಮಣಿಯುವುದಿಲ್ಲ.

ಶ್ರೀ ಎಚ್.ಎನ್. ನಂಜೇಗೌಡ : ಕಂಟಿನ್ಯೂಯಸ್ಸಾಗಿ ಬಿಡದೇ ಇದ್ದರೂ ಕೂಡ ನೀರಿದ್ದರೆ...

ಅಧ್ಯಕ್ಷರು : ನೀವು ಇರಿಗೇಷನ್ ಮಿನಿಸ್ಟರ್ ಆಗಿದ್ದರಿ. ಅವರು ಪಿ. ಡಬ್ಲ್ಯು.ಡಿ. ಮಿನಿಸ್ಟರ್ ಆಗಿದ್ದರು. ನಿಮಗೆ ಒಂದು ಐಡಿಯೂ ಇರುತ್ತದೆ ಇಂತಹ ಪರಿಸ್ಥಿತಿಯನ್ನು ಹೇಗೆ ಮ್ಯಾನೇಜ್ ಮಾಡುವುದು ಎಂದು ನೀವು ನೀವು ಕುಳಿತುಕೊಂಡು ಬಗೆಹರಿಸಿಕೊಳ್ಳಿ. ಇಲ್ಲಿ ವಾದ ಮಾಡುವುದು ಬೇಡ.

ಶ್ರೀ ಹೆಚ್.ಎನ್. ನಂಜೇಗೌಡ : ಅವಕಾಶ ಇದ್ದರೆ ನೋಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ. : ಸನ್ಯಾಸ್ಯ ನಂಜೇಗೌಡರು, ನೀರಾವರಿ ವಿಷಯದಲ್ಲಿ ಬಹುಶಃ ಸಾಕಷ್ಟು ತಜ್ಞರು ಇದ್ದಾರೆ, ಅನುಭವ ಇದೆ. ನನ್ನ ಹೆಲಿಕ್ಯಾಪ್ಟರ್ ಕೊಡುತ್ತೇನೆ. ಅವರೇ ಹೋಗಲಿ.ಸ್ಥಳದಲ್ಲಿ ಇಳಿದು, ನಾನು ಹೇಳಿದ್ದನ್ನು ವಿಷಯ ತಿಳಿದು, ಅದರ ಡ್ರೈವಿಂಗ್‌ಹೆಡ್ ಇದೆ ಎಂದು ಹೇಳಿದರು, ಅವರು ಹೇಳಿದ ಹಾಗೆ ತೀರ್ಮಾನ ಮಾಡುತ್ತೇನೆ. ಇದಕ್ಕಿಂತ ಹೆಚ್ಚು ಹೇಳುವುದಕ್ಕಾಗುವುದಿಲ್ಲ. I am prepared to agree with your suggestion. ಇದರೊಳಗೆ ಏನಾಗಿದೆ ಎಂದರೆ, ಹೇಳಬಾರದು ನಾನು ಇದನ್ನು. ಸಂಘರ್ಷಕ್ಕೆ ಇಳಿಯುವುದಕ್ಕೆ ನಾನು ಸಿದ್ದ ಇಲ್ಲ. Govt. of India forced that Chairman to release water.

ಪರಿಸ್ಥಿತಿ ಎಲ್ಲಿಗೆ ಬಂತು ಅಂದರೆ, ನಾವು, we took a decision. Come what may. You close the gate. ಎಂದು ಹೇಳಿದೆ ನಾನು. 120 ಕ್ಯೂಸೆಕ್ಸ್ ಹರಿದಿತ್ತು ಆಗ 'I will not allow.' ಎಂದು ಹೇಳಿದೆ. ಬಹಳ ಅತಿರೇಕಕ್ಕೆ ಹೋಗುತ್ತದೆಂದು ಯಾವುದೇ ವಿಷಯವನ್ನು ಸಭೆಯ ಮುಂದೆ ಇಟ್ಟರೆ confrontation between state to state, state and center ಆಗುತ್ತದೆಂಬ ಉದ್ದೇಶದಿಂದ ಕೆಲವು ಮಾತುಗಳನ್ನು ಹಿಡಿದು ನಾನು ಮಾತನಾಡುತ್ತಿದ್ದೇನೆ. What happened has happened.

ಕೇಂದ್ರ ಸರ್ಕಾರದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಅದರ ಪ್ರತಿನಿಧಿ ಯಾರು ಇದ್ದಾನೆ, ಅವನು ನಮ್ಮನ್ನು ಹೇಳದೆ ಕೇಳದೆ ನೀರನ್ನು ಬಿಡಬಹುದು. ಅದರಲ್ಲಿ ಒಂದು ಪ್ರಾವಿಷನ್ ಇದೆ. ತುಂಗಭದ್ರ ಬೋರ್ಡ್ ಆಕ್ಟ್‌ನಲ್ಲಿ. ಆರ್‌ಬಿಟ್ರೇರರಿಯಾಗಿ ಒಂದು ಟಿ.ಎಂ.ಸಿ. ನೀರನ್ನು ಬಿಡುವುದಕ್ಕೆ, there is a provision in the Act-even without the approval of the Board. All these things are there. Because I took a decision ನಮ್ಮ ಅಧಿಕಾರಿಗಳನ್ನು ಕಾಂಪ್ಲಿಮೆಂಟ್ ಮಾಡಬೇಕಾಗುತ್ತದೆ. They went and closed the gate. I said come what may . I will not allow.

ಅದು ಆದ ಮೇಲೆ ನಮ್ಮ ಮನೆ ಬಾಗಿಲಿಗೆ ಬಂದರು. ಏನಾದರೂ ಮಾಡಿ ಪಂಚಾಯಿತಿ ಮಾಡಿ ಕೊಂಡು ನಮಗೆ ಸ್ವಲ್ಪ ಕೊಡಿ. ನೀವೂ ಸ್ವಲ್ಪ ಇಟ್ಟುಕೊಳ್ಳಿ ಎಂದು ಹೇಳಿ. Only one lacuna was there. ಅದನ್ನು ಆವತ್ತೇ ಹೇಳಿದೆ. 1.6 ಟಿ.ಎಂ.ಸಿ. ನೀರನ್ನು ಬಿಡಲಿಕ್ಕೆ. the problem was that notification was issued in Jannuary, 1994. ಅದನ್ನು ಬೋರ್ಡಿನ ಎಲ್ಲಾ ಅಧಿಕಾರಿಗಳು ಸೇರಿ ಮಾಡಿರುವುದರಿಂದ ಆ ಷರತ್ತಿಗೆ, ನೀವು ಅಲ್ಲಿಯವರೆಗೆ ನೀರನ್ನು ಇಟ್ಟುಕೊಳ್ಳಿ ಎಂದು ಹೇಳಿದರು. ಆ ಕಂಡೀಷನ್ ಹಾಕಿದರು ಅದರೊಳಗೆ ಕೇಂದ್ರಸರ್ಕಾರದ ಪ್ರತಿನಿಧಿಗಳಾಗಿ ಬಂದಂತಹ ಅಧಿಕಾರಿಗಳು. 8 ಏಪ್ರಿಲ್ 1995ರವರೆಗೆ ನಮ್ಮ ಬೆಳೆಗೆ ನೀರು ಕೊಡಿ ಆಗಲೇ

ಏನು ನೋಟಿಫಿಕೇಷನ್ ಆಗಿದೆ ಅದಕ್ಕೆ ನಮ್ಮ ತಕರಾರು ಇಲ್ಲ ಎಂದು ಹೇಳಿದರು. ಆಲೆವಲ್ಲನ್ನೂ ಇಷ್ಟೇ ಮೈನ್‌ಟೈನ್ ಮಾಡಬೇಕು ಎಂದು ಇವೆಲ್ಲಾ ಷರತ್ತುಗಳನ್ನು ಹಾಕಿದರು. ಅವತ್ತು ಒಂದು ಇಂಟೀರಿಯಂ ಅರೇಂಜ್‌ಮೆಂಟ್‌ಗೆ ಬಂದಿದ್ದೇವೆ.

ಪ್ರಕಟಣೆ

ಸಭಾಧ್ಯಕ್ಷರು :

ದಿನಾಂಕ 3ನೇ ಏಪ್ರಿಲ್ 1995ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

4-4-1995 ಮಂಗಳವಾರ — ಬೆಳಿಗ್ಗೆ 9-30 ಘಂಟೆಗೆ ಸಭೆ ಸೇರುವುದು

1. ಪ್ರಶ್ನೋತ್ತರ
2. ಗಮನ ಸೆಳೆಯುವ ಸೂಚನೆಗಳು
3. ಶಾಸನ ರಚನೆ
   - ಅ) ವಿಧೇಯಕಗಳನ್ನು ಮಂಡಿಸುವುದು
   - ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು